# ಎತ್ತಣಾಗಮಣ್ಣ ನೀ ಎತ್ತಣಾಗವೆ ?

ಈ ಸೃಷ್ಟಿಯು ಒಂದು ನಾಟಕವಾಗಿದ್ದು ಪಶು, ಪಕ್ಷಿ, ಪ್ರಾಣಿ, ಕೀಟ, ಜಂತುಗಳು ಮತ್ತು ಬುದ್ಧಿವಂತ ಪ್ರಾಣಿಯಾದ ಮಾನವನು ಈ ಸೃಷ್ಟಿ ಮಂಚದ ಮೇಲೆ ವಾಸ ಮಾಡುತ್ತಿರುವ ಪಾತ್ರಧಾರಿಗಳು.

ಒಮ್ಮೆ ಇಡೀ ವಿಶ್ವ ಭೂಗೋಳದ ಮೇಲೆ ದೃಷ್ಟಿ ಬೀರಿದರೆ ಎಷ್ಟೊಂದು ವಿಚಿತ್ರವೆನಿಸುತ್ತದೆ. ಅವ್ಯಾಹಕವಾಗಿ,ಒಂದು ಸೆಕೆಂಡೂ ಸಹ ನಿಲ್ಲದೇ ಈ ನಾಟಕ ಚಕ್ರ ತಿರುಗುತ್ತಲೇ ಇದೆ. ಚಂದ್ರ, ತಾರೆ, ಗ್ರಹಗಳು ತಮ್ಮ ಕಕ್ಷೆಯಲ್ಲಿ ನಿಲ್ಲದೆ ಸುತ್ತುತ್ತಿವೆ. ಸಮಯಕ್ಕನುಗುಣವಾಗಿ ಋತುಗಳು, ಮಳೆ, ಚಳಿ, ಬೇಸಿಗೆ ಇದರ ಆಧಾರದ ಮೇಲೆ ಜೀವರಾಶಿ, ವನ್ಯಪ್ರಾಣಿ, ಪುರುಸೊತ್ತು ಇಲ್ಲದೆ ಚಲಿಸುತ್ತಿವೆ. ಎಂಥ ವಿಚಿತ್ರವಿದು! ಇಷ್ಟೊಂದು ವೇಗವಾಗಿ ಸೆಕೆಂಡು ವಿಶ್ರಮಿಸದೆ ಚಲಿಸುತ್ತಿರುವುದಾದರೂ ಏಕೆ? ಎಲ್ಲರೂ ಎತ್ತ ಹೋಗಲು ಯತ್ನಿಸುತ್ತಿದ್ದಾರೆ? ಇವರೆಲ್ಲರ ಗುರಿ ಏನು? ಕೊನೆಯಲ್ಲಿ ಎಲ್ಲಿ ಸೇರುವರು?

ದಾರಿಯಲ್ಲಿ ಓಡಾಡುವವರಿಗೆ, ಕಾಲ್ನಡಿಗೆಯಲ್ಲಿ ಸಾಗುತ್ತಿರುವವರಿಗೆ, ಸೈಕಲ್ ಸವಾರನಿಗೆ, ಮೋಟರ ಸೈಕಲ್, ಸ್ಕೂಟರು, ಕಾರು ಬಸ್ಸುಗಳ ಮೇಲೆ ಆಸೀನರಾದವರಿಗೆ ಕೈಗಡಿಯಾರ ನೋಡಿಕೊಳ್ಳುತ್ತ ಗಡಬಡಿಸುವವರಿಗೆಲ್ಲ ಒಂದೇ ಒಂದು ಕ್ಷಣ ನಿಲ್ಲಿಸಿ–'ತಾವೆಲ್ಲ ಎತ್ತ ಹೊರಟಿದ್ದೀರಿ?' ಎಂದು ಕೇಳಿದರೆ ಬಹುಶ: ಅವರು "ಕ್ಷಮಿಸಿ ಉತ್ತರಿಸಲು ನನಗೆ ಪುರಸೊತ್ತಿಲ್ಲ" ಎಂದು ಉತ್ತರಿಸಬಹುದಲ್ಲವೇ?

ಮಗುವು ಶಾಲೆಗೆ, ಬಡವರು ದುಡಿಮೆಗೆ, ವ್ಯಾಪಾರಸ್ಥರು ಅಂಗಡಿಗೆ, ನೌಕರರು ಆಫೀಸಿಗೆ, ರಾಜಕೀಯ ಗಣ್ಯರು ಜಗತ್ ಸೇವಗೆ, ಹೀಗೆಂದು ರಾತ್ರಿ ಹಗಲೂ ದುಡಿಯುತ್ತಿದ್ದಾರೆ, ನೀವೆಲ್ಲ ಎತ್ತ ಹೊರಟಿರುವಿರಿ? ಬೆಳಗಿನಿಂದ ಸಂಜೆಯವರೆಗೆ ಹುಟ್ಟಿನಿಂದ ಸಾಯುವವರೆಗೆ ಇದೇ ಏನು ಓಡಾಟ? ಇದೆ ಏನು ವಿಶ್ವನಾಟಕ? ಇದುವೇ ಜೀವನದ ರಹಸವೇ? ಇದಕ್ಕೆ ಪ್ರಪಂಚವೆಂದು ಹೇಳುವರೇ? ಇದೇ ಎನು ಜೀವನದ ಗುರಿ?

ಇದರ ಉತ್ತರ ಹೇಳಲು ಮಾನವನಿಗೆ ಬಿಡುವೇ ಇಲ್ಲ. ಬಹಳ busy ಮಾನವನಿಗೆ ತನ್ನ ಗುರಿಯಾದರೂ ಗೊತ್ತಿದೆಯೇ? ಜೀವನದಲ್ಲೊಂದು ಗುರಿಯಾದರೂ ಇದೆಯೇ? ಅದೇ ಇಲ್ಲದಿದ್ದರೆ ಅದು ಉದ್ದೇಶರಹಿತ ಜೀವನವಲ್ಲವೇ? ಇದರಿಂದೇನು ಪ್ರಯೋಜನ? ಭೂಮಿಗೆ ಭಾರವಲ್ಲವೇ? ಸಾಯಲು ಬರುವುದಿಲ್ಲಾ ಎಂದು ಜೀವಿಸುವುದೇ?

ಗುರಿ ಇಲ್ಲದ ಜೀವನ ಕಾಡಿನಲ್ಲಿ ಸಿಕ್ಕಿ ಬಿದ್ದ ಪ್ರಾಣಿಯ ಸಮಾನ ಎಂದು ಹೇಳಲಾಗುತ್ತದೆಯಲವೇ? ಇರಲಿ, ಪ್ರಾಣಿಗಳಿಗಂತೂ ಬುದ್ಧಿ ಇಲ್ಲ. ಆದರೆ ಬುದ್ಧಿ ಬಲಿತ ಮಾನವವಿಗಾದರೂ ತಿಳಿಯಬೇಡವೇ? ನಾನೆತ್ತ ಸಾಗುತ್ತಿದ್ದೇನೆ? ಏನು ಮಾಡುತ್ತಿರುವೆ? ಏನು ಮಾಡಬೇಕು? ನಾನೆಲ್ಲಿಂದ ಬಂದೆ? ಕಳುಹಿಸಿದವರಾರು? ಎತಕ್ಕೋಸ್ಕರ? ಜೀವನದ್ದೇನು ಗುರಿ, ಸಾಧಿಸಬೇಕಾದ್ದೇನಿದೆ? ಮರಳುಗಾಡಿನಲ್ಲಿ ಸಿಕ್ಕಿ ಬಿದ್ದ ಜಿಂಕೆಯೊಂದು ಮರಳಿನ ಹೊಳಪನ್ನೇ ನೀರೆಂದು ಭ್ರಮಿಸಿ ಓಡುವಂತೆ ಶ್ರೇಷ್ಠ ಪ್ರಾಣಿಯಾದ ಮಾನವ ತನ್ನ ಜೀವನದಲ್ಲಿ ನಿರಾಸೆಯ ಬೆಂಬತ್ತಿದ್ದಾನೆ. ಕೃತಕ ಹೊಳಪು, ಸುಖವನ್ನೇ ನಿಜವಾದ 'ಸುಖ' ಎಂದುಕೊಂಡಿದ್ದಾನೆ. ಇದರಲ್ಲಿಯೇ ತನ್ನ ತನು, ಮನ, ಧನವನ್ನು ಹಾಳು ಮಾಡುತ್ತಿದ್ದಾನೆ. ಸಂಪೂರ್ಣವಾಗಿ ಖಾಲಿಯಾಗಿ ಜರ್ಜರಿತನಾಗಿದ್ದಾನೆ.

ಈಗ ಪ್ರಾಣೇಶ್ವರ, ಪ್ರಾಣದಾತಾ, ಪರಮಪಿತ ಪರಮಾತ್ಮನು, ಅಜ್ಞಾನ ಅಂಧಕಾರದಲ್ಲಿರುವ, ಗುರಿ ಇಲ್ಲದೇ ತಿರುಗುತ್ತಿರುವ, ನೆಲೆ ಸಿಗದೇ ಅಲೆದಾಡುತ್ತಿರುವ ಮಾನವರಿಗೆ ಸತ್ಯ ಮಾರ್ಗದರ್ಶನ ಮಾಡಲು ಸರ್ವರಿಗೂ ಸಹಜವಾದ ಈಶ್ವರೀಯ ಜ್ಞಾನ ಹಾಗೂ ರಾಜಯೋಗದ ಮೂಲಕ ಮಾನವನ ಗುರಿ ಉದ್ದೇಶವನ್ನು 'ಈಶ್ವರೀಯ ವಿಶ್ವವಿದ್ಯಾಲಯ'ದ ಮುಖಾಂತರ ಪ್ರಸಾರ ಮಾಡುತ್ತಿದ್ದಾರೆ.

"ಹೇ ಮಾನವರೆಂಬ ಆತ್ಮರೂಪಿ ಮಕ್ಕಳೇ, ನೀವು ಕೇವಲ ಮಾನವರಾಗದೇ ದೇವಮಾನವರೂ ಆಗಬೇಕು.ಇದುವೇ ನಿಮ್ಮ ಗುರಿ, ಚಾರಿತ್ರವಂತರೂ, ಗುಣವಂತರೂ, ಸುಗುಣಗ್ರಾಹಿಗಳೂ ಆಗಿರಿ. ಪವಿತ್ರರೂ, ನಿರ್ವಿಕಾರಿಗಳಾಗಿ ಅನ್ಯರನ್ನೂ ಮಾಡಿರಿ, ಅಸುರರನ್ನು, ಅಸುರೀ ಗುಣಗಳನ್ನು ತ್ಯಜಿಸಿ ದೈವಿ ಗುಣಗಳ ಧಾರಣೆ ಮಾಡಿ ದೇವತ್ವವನ್ನು ಪಡೆಯುವುದೇ ಮಾನವರಾದ ನಿಮ್ಮೆಲ್ಲರ ಶ್ರೇಷ್ಠ ಗುರಿ, ಈ ಗುರಿ ಸಾಧಿಸಿದವನೇ ಶ್ರೇಷ್ಠ ಮಾನವ, ಆತನಿಗೆ ಇಡೀ ವಿಶ್ವವೇ ತಲೆಬಾಗುತ್ತದೆ. ಅವನೇ ಲೋಕಪ್ರಿಯ, ಸ್ವಯಂಪ್ರಿಯ, ಪ್ರಭುಪ್ರಿಯನೂ ಆಗುತ್ತಾನೆ. ಸಂಸಾರ ಹಾಗೂ ಜೀವನ ಜಂಜಾಟದಿಂದ, ಕರ್ಮ ಬಂಧನದಿಂದ ಮುಕ್ತನಾಗಿ ಮುಕ್ತಿ ಜೀವನ್ಮುಕ್ತಿಯನ್ನು ಹೊಂದುವನು. ಇಂದೂ ಮುಂದು ಎಂದು ಪರಮ ಸುಖಿಯಾಗಿರುತ್ತಾನೆ."

ಬನ್ನಿ ನಾವು ಎಲ್ಲರು ಸತ್ಯ ಜ್ಞಾನ ಹಾಗೂ ರಾಜಯೋಗದಿಂದ ನಮ್ಮ ಜೀವನ ಪಯಣದ ಗುರಿಯನ್ನು ತಲುಪೋಣ.

–ವಿಶ್ವಾಸ ಸೋಹೋನಿ.